## ಗೂಗ್ಲ್ ಡಾಕ್ಸ್




ಮೈಕ್ರೋಸಾಫ್ಟ್ ಆಫೀಸ್ 2013 ಅಧಿಕೃತವಾಗಿ ಮಾರುಕಟ್ಟೆಗೆ ಬಿಡುಗಡೆಯಾಗಿದೆ. ಇದರಲ್ಲಿ ವಿವಿಧ ಪರಿಷ್ಕೃತ ಸೌಲಭ್ಯಗಳಿದ್ದು, 'ಕ್ಲೌಡ್' ಸ್ನೇಹಿ ವ್ಯವಸ್ಥೆ ಕೂಡಾ ಲಭ್ಯ. ಆದರೆ ತಿಂಗಳಿಗೆ ಐದು ಸಾವಿರ ರೂಪಾಯಿ ಪಾವತಿಸಲೇಬೇಕು. ಈ ದುಬಾರಿ ಬೆಲೆ ತೆರಲು ಸಾಮರ್ಥ್ಯವಿಲ್ಲದವರಿಗೆ ಉಚಿತ ಆಯ್ಕೆಗಳ ಅವಕಾಶವಿದೆ. ಇವುಗಳಲ್ಲಿ ಗೂಗ್ಲ್ ಡಾಕ್ಸ್ ಒಂದು.

ಈ ಅಪ್ಲಿಕೇಶನ್‌ನಿಂದ ಟೆಕ್ಸ್ಟ್, ಡಾಕ್ಯುಮೆಂಟ್, ಸ್ಪ್ರೆಡ್‌ಶೀಟ್, ಡ್ರಾಯಿಂಗ್ಸ್ ಮೊದಲಾದವುಗಳನ್ನು ಸೃಷ್ಟಿಸಿಕೊಳ್ಳಬಹುದು. ಮೈಕ್ರೋಸಾಫ್ಟ್ ಆಫೀಸ್ ಫೈಲ್‌ಗಳನ್ನು ಇಂಪೋರ್ಟ್ ಮತ್ತು ಎಕ್ಸ್‌ಪೋರ್ಟ್ ಮಾಡಿಕೊಳ್ಳಬಹುದು. ಇದಕ್ಕೆ ಗೂಗ್ಲ್ ಖಾತೆ ಇದ್ದರೆ ಸಾಕು. ಆದರೆ ಒಂದು ಹಿನ್ನಡೆ ಈ ಆಯ್ಕೆಯಲ್ಲಿದೆ. ಇದಕ್ಕೆ ವೆಬ್ ಸಂಪರ್ಕ ಮತ್ತು ಬ್ರೌಸರ್ ಇರಲೇಬೇಕು.

ಹಾಗೆಯೇ ಮೈಕೋಸಾಫ್ಟ್ ಆಫೀಸ್ ವೆಬ್ ಅಪ್ಲಿಕೇಶನ್ ಕೂಡಾ ಉಚಿತ. ಇದು ಕ್ಲೌಡ್ ಆಧಾರಿತವಾಗಿದ್ದು ವರ್ಡ್, ಎಕ್ಸೆಲ್, ಪವರ್ ಪಾಯಿಂಟ್ ಮತ್ತು ಒನ್ ನೋಟ್‌ನ ವೆಬ್ ಆವೃತ್ತಿಗಳನ್ನು ಒಳಗೊಂಡಿದೆ.

## ಜಿಯೊ ಟಾಸ್ಕರ್

ಮೊಬೈಲ್‌ನ ಈ ಅಪ್ಲಿಕೇಶನ್ ನಿಮಗೆ ದಿನ ನಿತ್ಯದ ಸಾಮಾನ್ಯ ಕೆಲಸಗಳನ್ನು ನೆನಪಿಸುತ್ತದೆ. ಮನೆಗೆ ವಾಪಸ್ಸಾಗುವಾಗ ಬಸ್ ನಿಲುಗಡೆ ಬಳಿ ಇರುವ ಕಚೇರಿಯಲ್ಲಿ ವಿದ್ಯುತ್ ಬಿಲ್ ಕಟ್ಟಬೇಕು ಎಂದಿಟ್ಟುಕೊಳ್ಳಿ. ಬಸ್ ನಿಲುಗಡೆ ಲೊಕೇಶನ್ ಅನ್ನು ಟಾಸ್ಕ್‌ನಲ್ಲಿ ಸೇರಿಸಿದರೆ ಆಯ್ತು. ಸರಿಯಾಗಿ ನಿಲುಗಡೆ ಬಂದ ಕೂಡಲೇ ನಿಮ್ಮನ್ನು ಎಚ್ಚರಿಸುತ್ತದೆ. ಹಾಗೇ ಬಸ್‌ನಲ್ಲಿ ನಿದ್ರೆ ಮಾಡುವ ಹವ್ಯಾಸವಿದ್ದರೆ ನೀವು ಇಳಿಯುವ ಸ್ಥಳವನ್ನು ಟಾಸ್ಕ್‌ನಲ್ಲಿ ಸೇರಿಸಿ. ಅದು ಬಂದ ಕೂಡಲೇ ಫೋನ್ ಕೂಗಿಕೊಂಡು ನಿಮ್ಮನ್ನು ಎಚ್ಚರಿಸುತ್ತದೆ. ಕಚೇರಿಯಲ್ಲಿ ಮಧ್ಯಾಹ್ನ ಊಟವಾದ ಕೂಡಲೇ ಕ್ಯಾಂಟೀನ್‌ನಿಂದ ಹೊರ ಬರುವಾಗ ಹೆಂಡತಿಗೆ ಫೋನ್ ಮಾಡಲು ಮರೆತರೆ.. ಅದನ್ನೂ ಟಾಸ್ಕ್‌ಗೆ ಸೇರಿಸಬಹುದು.




## ಸಾಂಗಿಫೈ




ನೀವು ಸುಮ್ಮನೆ ಶಬ್ದಗಳನ್ನು ಉಚ್ಚರಿಸಿ. ಸಾಂಗಿಫೈ ಅಪ್ಲಿಕೇಶನ್ ಆ ಶಬ್ದಗಳನ್ನು ಹಾಡಾಗಿ ಬದಲಿಸುತ್ತದೆ. ಐಒಎಸ್ ಸಾಧನದಲ್ಲಿ ಲಭ್ಯ ಇರುವ ಈ ಅಪ್ಲಿಕೇಶನ್ ತೆರೆದು ರೆಕಾರ್ಡ್ ಬಟನ್ ಒತ್ತಿ. ಏನು ಬೇಕಾದರೂ ಮಾತನಾಡಿ. ಭಾಷಣ ಮಾಡಿ, ಕವನ ಓದಿ, ಶುಭಾಶಯ ಹೇಳಿ. ನೀವು ಮಾತನಾಡಿ ಮುಗಿಸಿದ ನಂತರ ಪ್ಲೇ ಬಟನ್ ಒತ್ತಿ. ನೀವು ಹೇಳಿದ್ದೆಲ್ಲ ಹಾಡಿನ ರೂಪದಲ್ಲಿ ಕೇಳಿಸುತ್ತದೆ. ಸ್ವರದಲ್ಲಿ ಏರಿಳಿತದ ಜೊತೆಗೆ ಹಿನ್ನೆಲೆ ಸಂಗೀತ ಕೂಡಾ ಇರುತ್ತದೆ. ಇಷ್ಟವಾಗದಿದ್ದರೆ ರಿ-ಸಾಂಗಿಫೈ ಬಟನ್ ಒತ್ತಿ. ಬೇರೆ ಶೈಲಿಯಲ್ಲಿ ಹಾಡು ಕೇಳುತ್ತದೆ. ಇದು ಎಲೆಕ್ಟ್ರಾನಿಕ್ ದನಿಯಾಗಿದ್ದು, ನಿಮ್ಮ ಧ್ವನಿಯನ್ನು ಹೋಲುತ್ತದೆ.

## ಎವ್ರಿಥಿಂಗ್




ವೆಬ್ ಸಂಪರ್ಕವಿಲ್ಲದೇ ಓಡುವ ಸರ್ಚ್ ಮಷಿನ್ ಇದು. ಆಂಡ್ರಾಯ್ಡ್ ಮತ್ತು ಐಒಎಸ್ ಮೊಬೈಲ್ ಸೆಟ್‌ಗಳಲ್ಲಿ ಅಳವಡಿಸಬಹುದು. ಸೆಟ್‌ನ ಡಿಫಾಲ್ಟ್ ಬ್ರೌಸರ್‌ಗೆ ಹೋಗಿ. ಒಪೆರಾ ಮಿನಿ ಇದ್ದರೆ ಒಳ್ಳೆಯದು. ಅಲ್ಲಿ ಎವ್ರಿಥಿಂಗ್.ಮಿ ಎಂದು ಟೈಪಿಸಿ. ಬಿಂಗ್ ಸರ್ಚ್ ಮಷಿನ್ ತರಹ ಕಾಣುವ ವೆಬ್ ಅಪ್ಲಿಕೇಶನ್ ತೆರೆದುಕೊಳ್ಳುತ್ತದೆ. ಅಲ್ಲಿ ಸರ್ಚ್ ಬಾಕ್ಸ್ ಕಾಣಿಸಿಕೊಳ್ಳುತ್ತದೆ. ನಿಮಗೆ ಬೇಕಾದ ವಿಷಯವನ್ನು ಟೈಪ್ ಮಾಡಿ. ಗೂಗ್ಲ್ ಮತ್ತು ಬಿಂಗ್ ಫಲಿತಾಂಶಗಳನ್ನು ಬರಹದ ರೂಪದಲ್ಲಿ ನೀಡಿದರೆ ಎವ್ರಿಥಿಂಗ್ ಐಕಾನ್ ರೂಪದಲ್ಲಿ ತೋರಿಸುತ್ತದೆ. 3ಜಿ ಅಥವಾ ವೈ-ಫಿ ಸಂಪರ್ಕ ಇದ್ದರೆ ವೇಗವಾಗಿ ಫಲಿತಾಂಶ ಪಡೆಯಬಹುದು.

■ ಎಸ್. ತುಂಬೆ